ಕರ್ನಾಟಕ ಸರ್ಕಾರ

**ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.**

*E-mail:Commissioner.pue@gmail.com. Ph. No.23361857, 23361858* Fax-23361852*

ಸಂಖ್ಯೆ: ಪಪೂಶಿಇ/ಆಡಳಿತ-1/GPL/ಸಿಆರ್-01/ಪ್ರಾ.ವರ್ಗ/01/2022-23 ದಿನಾಂಕ: 13-09-2022

## ಜ್ಞಾಪನ

**ವಿಷಯ:-** 2022-23ನೇ ಸಾಲಿನಲ್ಲಿ ನಡೆಯುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಕೋರಿಕೆ ವರ್ಗಾವಣೆ ಕೌನ್ಸೆಲಿಂಗ್‌ಗಾಗಿ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆ ಪ್ರಕಟಿಸುವ ಬಗ್ಗೆ.

**ಉಲ್ಲೇಖ:-** 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021. ದಿನಾಂಕ:12-05-2022.

2.ಈ ಕಚೇರಿ ಸಮಸಂಖ್ಯೆ ವರ್ಗಾವಣಾ ಮಾರ್ಗಸೂಚಿ ದಿನಾಂಕ: 18-05-2022.

* * *

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ 2022-23ನೇ ಸಾಲಿನ ವರ್ಗಾವಣೆ ಕೌನ್ಸೆಲಿಂಗ್‌ಗಾಗಿ ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಉಲ್ಲೇಖಿತ ಜ್ಞಾಪನದಂತೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಪ್ರಾಂಶುಪಾಲರುಗಳು ವಿವಿಧ ಆದ್ಯತೆ ಅಡಿ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಮುಖೇನ ಸಲ್ಲಿಸಿರುತ್ತಾರೆ.

1. ಕೋರಿಕೆ ವರ್ಗಾವಣೆಗೆ ಸಲ್ಲಿಸಲಾಗಿರುವ ಅರ್ಜಿಗಳನ್ನು ಪರಿಶೀಲಿಸಲಾಗಿ, ಅಗತ್ಯ ದಾಖಲೆಗಳನ್ನು ಸಲ್ಲಿಸಿರುವ ಪ್ರಾಂಶುಪಾಲರ ತಾತ್ಕಾಲಿಕ ಅರ್ಹ ಪಟ್ಟಿಯನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಿದೆ. ಈ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಇ-ಮೇಲ್ ವಿಳಾಸ dpuetransfer22@gmail.com ಇಲ್ಲಿಗೆ ದಿನಾಂಕ: 16-09-2022ರ ಸಂಜೆ 05-30ರ ಒಳಗಾಗಿ ಸಲ್ಲಿಸುವುದು.
2. ಅಗತ್ಯ ಮಾಹಿತಿ/ದಾಖಲೆಗಳನ್ನು ಸಲ್ಲಿಸದೇ ಇರುವ ಪ್ರಾಂಶುಪಾಲರ ಪಟ್ಟಿಯನ್ನು ABEYANCE ಪಟ್ಟಿಯಲ್ಲಿ ಇಡಲಾಗಿದ್ದು, ಸದರಿ ಪಟ್ಟಿಯನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ. ABEYANCE ನಲ್ಲಿ ಇಡಲಾಗಿರುವ ಪಟ್ಟಿಯ ಷರಾ ಕಾಲಂನಲ್ಲಿ ತಿಳಿಸಿರುವಂತೆ/ನಮೂದಿಸಿರುವಂತೆ ಅಗತ್ಯ ಮಾಹಿತಿ/ದಾಖಲೆಗಳನ್ನು ಇ-ಮೇಲ್ ವಿಳಾಸ dpuetransfer22@gmail.com ಇಲ್ಲಿಗೆ ದಿನಾಂಕ: 16-09-2022ರ ಸಂಜೆ 05-30ರ ಒಳಗಾಗಿ ಸಲ್ಲಿಸಿದಲ್ಲಿ, ಪರಿಶೀಲಿಸಿ ನಿಯಮಾನುಸಾರ ಪರಿಗಣಿಸಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

**ರವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರುಗಳಿಗೆ – ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.

.....2

2. ಸಹಾಯಕ ನಿರ್ದೇಶಕರು – ಇ-ಆಡಳಿತ, ನಿರ್ದೇಶಕರ ಕಚೇರಿ. ಪದವಿ ಪೂರ್ವ ಶಿಕ್ಷಣ ಇಲಾಖೆ – ಅಂತರ್ಜಾಲದಲ್ಲಿ ಮಾಹಿತಿಗಳನ್ನು ಅಳವಡಿಸುವ ಬಗ್ಗೆ ಮತ್ತು ಅಗತ್ಯ ಕ್ರಮಕ್ಕೆ.
3. ಸಂಬಂಧಿಸಿದ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ.
4. **ಕಚೇರಿ / ಹೆಚ್ಚುವರಿ ಪ್ರತಿ**